"ನಿಮ್ಮಪ್ಪ, ನನ್ನನ್ನ ಗೇಲಿ ಮಾಡಿದ್ದಾರೆ" ತರೇಸಾ ಹೇಳಿದಳು.

ಆದರೆ, ಸಂಜೆ ತೋಟದತ್ತ ಹೋದಾಗ ಹಣ್ಣಾದ ಅನಾನಸನ್ನು ತರೇಸಾ ಕಂಡಿದ್ದಳು.

ಮಂಗಳೂರು ತಲುಪುವ ಮೊದಲೇ ಅಪ್ಪ ಕಣ್ಣು ತೆರೆದರು. ಗದ್ದೆಯ ಬದುವಿನಲ್ಲಿದ್ದ ತಾನು ಇಲ್ಲಿಗೆ ಹೇಗೆ ಬಂದೆನೆಂದು ಅವರು ಸುತ್ತಲೂ ಕಣ್ಣುಗಳನ್ನು ತೆರೆದು ನೋಡಿದರು. ಅವರ ಮುಖದಲ್ಲಿ ಗಾಬರಿಯಿತ್ತು. ನರ್ಸ್‌ಗಳ ಮಾತನ್ನು ಲಕ್ಷಿಸದೆ ಅಪ್ಪ ಆಕ್ಸಿಜನ್ ಮಾಸ್ಕನ್ನು ತೆಗೆದುಹಾಕಿ ಅಡೆತಡೆಯಿಲ್ಲದೆ ಉಸಿರಾಡತೊಡಗಿದರು.

"ಎಲ್ಲಿ ನನ್ನ ಬೀಡಿ?"

ಪ್ರೇಮಚಂದ್ರ ಅಪ್ಪನಿಗೆ ಗೊತ್ತಿಲ್ಲದೆ ಕೈಯಲ್ಲಿದ್ದ ಬೀಡಿಗಳನ್ನು ಹೊರತೆಗೆದ. ತುಂಬಾ ನಿರಾಶರಾಗಿ ಅಪ್ಪ ಪುನಃ ಕೇಳಿದರು.

"ಈಗ ನಾವು ಎಲ್ಲಿಗೆ ಹೋಗ್ತಿದ್ದೀವಿ?"

"ಮಂಗಳೂರಿಗಪ್ಪ" ಪ್ರೇಮಚಂದ್ರ ಹೇಳಿದ.

"ಏಕೆ? ನಿನಗೇನಾದರೂ ಕಾಯಿಲೆ ಇದೆಯಾ?"

ಅಪ್ಪನ ಈ ಪ್ರಶ್ನೆಗೆ ನರ್ಸ್‌ಗಳಿಗೆ ನಗು ತಡೆಯಲಾಗಲಿಲ್ಲ. ಅವರು ಬಾಯಿ ಮುಚ್ಚಿಕೊಂಡು ಮುಸು ಮುಸು ನಕ್ಕರು.

"ಅಪ್ಪಾ ಮಲಕ್ಕೊಳ್ಳಿ."

ಪ್ರೇಮಚಂದ್ರ ಅಪ್ಪನನ್ನು ಮಲಗಿಸಲು ವಿಫಲ ಪ್ರಯತ್ನ ನಡೆಸಿದ. ಅಪ್ಪ ಮಗನ ಕೈಯನ್ನು ಕಿತ್ತೆಸೆದ. ಹಸುವಿನ ಬಲಗಾಲಿನ ಬಿರುಸು ಆ ಕೈಗಳಗಿತ್ತು. ಪ್ರೇಮಚಂದ್ರನಿಗೆ ಸ್ವಲ್ಪ ನೋವಾಯಿತು.

"ಪ್ರೇಮಾ, ನನಗೊಂದು ಚಹ ಬೇಕಿತ್ತು" ಅಪ್ಪ ಕೇಳಿದರು.

"ಅಪ್ಪಾ, ನಿನಗೆ ಹುಷಾರಿಲ್ಲ, ಸುಮ್ಮನೆ ಮಲಕ್ಕೋ" ಪ್ರೇಮಚಂದ್ರ ಹೇಳಿದ.

"ನನಗೆ... ನನಗೆ ಹುಷಾರಿಲ್ವಾ?" ಅಪ್ಪ ಏದುಸಿರು ಬಿಡುತ್ತಾ ಗಟ್ಟಿಯಾಗಿ ನಕ್ಕರು.

ಆಸ್ಪತ್ರೆ ತಲುಪಿದ ಕೂಡಲೇ ಅಪ್ಪನನ್ನು ಸ್ಟ್ರೆಚ್ಚರಿನಲ್ಲಿ ಮಲಗಿಸಿ ನೇರವಾಗಿ ಐ.ಸಿ.ಯುಗೆ ಕೊಂಡೊಯ್ಯಲಾಯಿತು. ಬಾಗಿಲು ಮುಚ್ಚಲಾಯಿತು. ಬಹಳಷ್ಟು ಮಂದಿ ಡಾಕ್ಟರು ತರಾತುರಿಯಿಂದ ಒಳಹೋಗುವುದು, ಹೊರಹೋಗುವುದು ಮಾಡುತ್ತಿದ್ದರು. ಪ್ರೇಮಚಂದ್ರನಿಗೆ ಗಾಬರಿಯೆನಿಸಿತು. ಅವನು ಹೊರಗೆ ಕಾಯುತ್ತಾ ಕುಳಿತ.

ಅತಿಯಾದ ಆತ್ಮೀಯತೆ ಇಲ್ಲವಾದರೂ ಅಪ್ಪ ಸಾಯುವ ವಿಷಯ ನೆನಸಿಕೊಂಡಾಗ ಅವನಿಗೆ ಬೇಸರವೆನಿಸಿತು.

ಅರ್ಧ ಗಂಟೆಯಾದ ಕೂಡಲೇ ಡಾಕ್ಟರ್ ಪ್ರೇಮಚಂದ್ರನನ್ನು ಕರೆಯಿಸಿಕೊಂಡರು.

ಪ್ರೇಮಚಂದ್ರ ಡಾಕ್ಟರ್ ಎದುರಿರುವ ಕುರ್ಚಿಯಲ್ಲಿ ಕುಳಿತುಕೊಂಡ.

"ಸಿವಿಯರ್ ಅಟ್ಯಾಕ್ ಆಗಿತ್ತು. ಸರಿಯಾದ ಸಮಯಕ್ಕೆ ಕರ್ಕೊಂಡು ಬಂದಿದ್ದರಿಂದ ಉಳ್ಕೊಂಡ್ರು."

ಪ್ರೇಮಚಂದ್ರ ಕಣ್ಮುಚ್ಚಿ ದೇವರನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದ.

ನೋಟ್‌ಬುಕ್ ಕೊಳ್ಳಲು ಅಪ್ಪ ಮೆಣಸನ್ನು ಅಳೆದು ಕಿರುಪಂಚೆಯಲ್ಲಿ ಕಟ್ಟಿ ಕೊಡುತ್ತಿದ್ದ ಹಳೆಯ ನೆನಪು ಅವನ ಮನಸ್ಸಿನೊಳಕ್ಕೆ ನುಗ್ಗಿ ಬಂತು. ಪ್ರೇಮಚಂದ್ರ ಯಾರಿಗೂ ಕಾಣಿಸದಂತೆ ಕಣ್ಣುಗಳನ್ನು ಉಜ್ಜಿಕೊಂಡ.

ದೀಪುವಿನ ಅಡ್ಮಿಷನ್‌ಗೆ ತರೇಸಾಳೇ ಹೋಗಲೆಂದು ಪ್ರೇಮಚಂದ್ರ ಖಚಿತಪಡಿಸಿಕೊಂಡ. ಅವನು ಮೊಬೈಲ್ ಆಫ್ ಮಾಡಿ ಜೇಬಿಗೆ ತುರುಕಿದ.

ಮರುದಿನ ಮಧ್ಯಾಹ್ನದ ವೇಳೆ.